**ಫ್ರೆಂಚ್ ಲೇಖಕರಾದ ಸಿಮೊನ್ ದ ಬೊವಾ ಮತ್ತು ಜೇನ್ ಪಾಲ್ ಸಾರ್ತ್ರ್ ಸಂಗಾತಿಗಳು. 1930ರಿಂದ ಶುರುವಾದ ಈ ಒಡನಾಟ ಹಲವು ಬೌದ್ಧಿಕ ನಿರೂಪಣೆಗಳಿಗೆ ಸಾಕ್ಷಿಯಾಯಿತು. ಅಸ್ತಿತ್ವವಾದ ಸಾರ್ತ್ರ್ ರೂಪಿಸಿದ ತತ್ತ್ವವಾದರೆ, ಸ್ತ್ರೀವಾದದ ವಿರಾಟ್‌ರೂಪವನ್ನು ಕಾಣಿಸಿದ್ದು ಬೊವಾ. ಅವರಿಬ್ಬರೂ ಪರಸ್ಪರ ನೂರಾರು ಪತ್ರಗಳನ್ನು ಬರೆದುಕೊಂಡರು. ಬೊವಾ ಸಾರ್ತ್ರ್‌ರ ಕುರಿತು ನೆನಪಿನ ಮಾಲೆ ಹೆಣೆದರು. ಇವೆಲ್ಲ ಫ್ರೆಂಚ್‌ನಲ್ಲಿ ಬರೆದದ್ದು. ನಂತರ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾದವು. ಇಂಗ್ಲಿಷ್ ಕೃತಿ 'Adieux'(A Farewell to Sartre) ಯಲ್ಲಿ ಸಾರ್ತ್ರ್‌ರೊಂದಿಗಿನ ಕೊನೆಯ 10 ವರ್ಷದ ನೆನಪುಗಳನ್ನು ಬೊವಾ ದಾಖಲಿಸಿದ್ದಾರೆ. ತಾತ್ತ್ವಿಕ ಜಿಜ್ಞಾಸೆ, ಹರಟೆ, ಭಿನ್ನಮತ, ಪ್ರೀತಿ, ಖಾಸಗಿ ವಿವರಗಳ ಸಮೃದ್ಧ ದಾಖಲೆಯಿದು. ಇದರ ಇಂಗ್ಲಿಷ್ ಅನುವಾದಕ ಪ್ಯಾಟ್ರಿಕ್ ಓ ಬ್ರಿಯಾನ್. ಇಲ್ಲಿನ ಒಂದು ಸಣ್ಣ ಬರಹದ ಕನ್ನಡ ಅನುವಾದವನ್ನು ಸಾರ್ತ್ರ್ ಸ್ಮರಣೆಯ (ಜೂನ್ 21, 1905 – ಏಪ್ರಿಲ್ 15, 1980) ನೆಪದಲ್ಲಿ ಕೊಡಲಾಗಿದೆ.**

**1980**ರ ಜನವರಿಯಲ್ಲಿ ಸಖಾಕೊವ್ ಅವರನ್ನು ಗೃಹಬಂಧನದಲ್ಲಿಡಲಾಗಿತ್ತು. ಇದನ್ನು ವಿರೋಧಿಸಿದ ಸಾರ್ತ್ರ್ ಮಾಸ್ಕೋದಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡಾಕೂಟವನ್ನು ಬಹಿಷ್ಕರಿಸುವ ನಿರ್ಣಯಕ್ಕೆ ಸಹಿ ಹಾಕಿದರು. ಫೆಬ್ರುವರಿ 28ರಂದು 'ಗೇ ಪಾಯಿಂಟ್' ಪತ್ರಿಕೆಗೆ ಸಂದರ್ಶನ ಕೊಟ್ಟರು. 'ಲಾರ್ಕ್' ಪತ್ರಿಕೆಯ ಮುಂದಿನ ಸಂಚಿಕೆಗಾಗಿ ಕ್ಯಾಥರಿನ್ ಕ್ಲೆಮೆಂಟ್ ಮತ್ತು ಬರ್ನಾರ್ಡ್ ಪಿಗ್ವೆದ್ ಜೊತೆ ಮಾತುಕತೆ ನಡೆಸಿದರು. ಆದರೆ, ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದಿದ್ದರಿಂದ ಫೆಬ್ರುವರಿ 4ರಂದು ಆರೋಗ್ಯದ ತಪಾಸಣೆ ಮಾಡಿಸಿದೆವು. ಅಂಥ ಸುಧಾರಣೆ ಏನೂ ಕಂಡುಬರಲಿಲ್ಲ. ಜೊತೆಗೆ ಹದಗೆಡಲೂ ಇಲ್ಲ ಎಂಬುದೇ ಸದ್ಯಕ್ಕೆ ಸಮಾಧಾನದ ಸಂಗತಿ. ಇವೆಲ್ಲ ಬದಲಾವಣೆಗಳು ಅವರಿಗೆ ಅಚ್ಚರಿ ಉಂಟುಮಾಡಿದವು. ಇಷ್ಟೆಲ್ಲ ಆದ ಮೇಲೂ ಜೀವನ ಅವರಿಗೆ ಮೋಜಿನ ಸಂಗತಿಯಾಗಿಯೇ ತೋರಿತ್ತು. ವಿಶೇಷವಾಗಿ ತರುಣಿಯರ ಜೊತೆ ಅವರ ಹರಟೆ ಉತ್ಸಾಹದಿಂದ ಗಂಟೆಗಟ್ಟಲೆ ಮುಂದುವರಿಯುತಿತ್ತು. ನನಗಿನ್ನೂ ಚೆನ್ನಾಗಿ ನೆನಪಿದೆ; ಚಳಿಗಾಲದ ಒಂದು ಮುಂಜಾನೆ ಸೂರ್ಯನ ಕಿರಣಗಳು ಓದುವ ಕೋಣೆಗೆ ನುಗ್ಗಿ ಅವರ ಮುಖದ ಮೇಲೆ ಹರಡಿಕೊಂಡಿದ್ದವು. ಅವರು ಸಂತೋಷದಿಂದ, 'ವಾವ್, ಎಷ್ಟು ಆಹ್ಲಾದಕರವಾಗಿದೆ ಇದು' ಎಂದು ಖುಷಿಪಟ್ಟಿದ್ದರು. ಕೆಲ ದಿನಗಳ ಹಿಂದೆ ನಾವೊಂದು ಯೋಜನೆ ರೂಪಿಸಿದ್ದೆವು. ಸಾರ್ತ್ರ್,